

# ಪುಟ್ಟ ಪುಟ್ಟ ಹೆಜ್ಜೆ ಇಟ್ಟು

## ಮಕ್ಕಳ ಕುಣಿತಕ್ಕೆ ಕಿನ್ನರ ಸ್ಪರ್ಶ

■ ಸುಕೃತ ಎಸ್.



ಆಸ್ಟ್ರೇಲಿಯಾದಿಂದ ಬಂದಿದ್ದ ನಾಲ್ವರು ಕಿನ್ನರರು ಪುಟ್ಟ ಪುಟ್ಟ ಮಕ್ಕಳಿಗಾಗಿ ಹೊಸ ಲೋಕವೊಂದನ್ನು ಹೊತ್ತು ತಂದಿದ್ದರು. ಪುಟ್ಟ ಮಕ್ಕಳನ್ನು ತಮ್ಮ ವಶ ಮಾಡಿಕೊಳ್ಳುತ್ತಾ, ಹೊಸ ಲೋಕಕ್ಕೆ ಅವರನ್ನು ಸನ್ನದ್ಧಗೊಳಿಸುತ್ತಿದ್ದರು. ಮಕ್ಕಳೂ ಅವರು ಕರೆದಂತೆ ಹಿಂದೆ ಸಾಗುತ್ತಾ, ಪುಟ್ಟ ಪುಟ್ಟ ಹೆಜ್ಜೆ ಇಡುತ್ತಾ, ನಗುತ್ತಾ ಹಾಗೇ ಸಾಗಿ ನಡೆದರು.

ಬೆಂಗಳೂರಿನ ಅಟ್ಟಕ್ಕಳರಿ ಮೂವ್‌ಮೆಂಟ್ಸ್ ಫಾರ್ ಆರ್ಟ್ ಸೆಂಟರ್‌ನಲ್ಲಿ ಆಸ್ಟ್ರೇಲಿಯಾದಿಂದ ಬಂದಿದ್ದ, ಶೆಲ್ಲಿ ಚಾನ್ಸ್, ಸ್ಟೀಫನ್, ಹೆಲ್ತರ್ ಹಾಗೂ ಫೆಲಿಸಿಯಾ, 2ರಿಂದ 3 ವರ್ಷದ ಮಕ್ಕಳಿಗಾಗಿ ‘ಟಚ್ ಆ್ಯಂಡ್ ಗೋ’ ಎನ್ನುವ ಪ್ರದರ್ಶನವನ್ನು ನೀಡಲು ಬಂದಿದ್ದರು.

ಇದೊಂದು ವಿನೂತನ ಪ್ರದರ್ಶನ. ಸಂಗೀತ ಹಾಗೂ ನೃತ್ಯರೂಪಕದ ಮೂಲಕ ಪುಟ್ಟ ಮಕ್ಕಳನ್ನು ಸೇರಿಸಿಕೊಂಡು ರಂಗಪ್ರದರ್ಶನ ನೀಡಲಾಗುತ್ತದೆ. ಮಕ್ಕಳನ್ನು ಮೊದಲೇ ತಯಾರು ಮಾಡಿ, ನೀಡುವ ಪ್ರದರ್ಶನ ಇದಲ್ಲ. ಬದಲಿಗೆ ಆ ನಾಲ್ಕು ಮಂದಿಯೇ ಪ್ರದರ್ಶನಕ್ಕಾಗಿ ತಯಾರಿ ನಡೆಸಿಕೊಂಡು ಬಂದಿರುತ್ತಾರೆ! ಇದೇ ಈ ಪ್ರದರ್ಶನದ ವಿಶೇಷ. ಶೆಲ್ಲಿ ಮತ್ತು ಅವರ ಜತೆಯವರು, ಕೇವಲ ನೃತ್ಯ ಮತ್ತು ಸಂಗೀತದ ಮೂಲಕವೇ ಮಕ್ಕಳನ್ನು ಅವರ ಕಥನದ ಭಾಗ ಮಾಡಿಕೊಳ್ಳುತ್ತಾರೆ. ಮಕ್ಕಳು ತಮಗೇ ಗೊತ್ತಿಲ್ಲದ ಹಾಗೆ ಆ ಕಥನದ ಪಾತ್ರಧಾರಿಗಳಾಗುತ್ತಾರೆ; ಅಲ್ಲೇ ವೇದಿಕೆ ಮೇಲೆಯೇ!

ನೃತ್ಯ ರೂಪಕ ಎಂದಾಕ್ಷಣ ಯಾವುದೇ ಶಾಸ್ತ್ರೀಯ ಕಲ್ಪನೆ ಬೇಕಾಗಿಲ್ಲ. ಮಕ್ಕಳಿಗಾಗಿಯೇ ರೂಪುಗೊಂಡಿರುವ ಪ್ರದರ್ಶನ ಇದಾದ್ದರಿಂದ, ಬಹಳ ಸರಳವಾಗಿಯೇ ಇರುತ್ತದೆ. ತಾಳವನ್ನು ಅನುಸರಿಸಿಕೊಂಡು ಹೆಜ್ಜೆ ಹೋಗುವ ನೃತ್ಯವಲ್ಲ; ಹೆಜ್ಜೆಯನ್ನು ಅನುಸರಿಸಿಕೊಂಡು ತಾಳ ಕಟ್ಟುವ ಬಗೆಯಿದು. ಮಕ್ಕಳು ಮನೆಯಲ್ಲಿ ಸಂಗೀತ ಕೇಳಿದರೆ, ಸಹಜವಾಗಿ ಮಾಡುವ ಕುಣಿತಕ್ಕೆ ರೂಪ ಕೊಡಲಾಗಿದೆ; ಒಂದು ಕಥೆ ಹೆಣೆಯಲಾಗಿದೆ ಅಷ್ಟೇ. ಮಕ್ಕಳು ಸಂಪೂರ್ಣವಾಗಿ ಮಕ್ಕಳಾಗಿರುವ ಪ್ರದರ್ಶನ ಅಂತಲೂ ಇದನ್ನು ಕರೆಯಬಹುದೇನೋ.

ಅವು 2–3 ವರ್ಷದ ಪುಟ್ಟ ಮಕ್ಕಳು. ತಪ್ಪುಹೆಜ್ಜೆಗಳ ನಡಿಗೆಯಲ್ಲಿ ನೃತ್ಯವನ್ನು ಕಾಣುವ ಪ್ರಯತ್ನ ಈ ಪ್ರದರ್ಶನ. ಅದು ನಡೆದಿದ್ದು ಹೀಗೆ: ಪುಟ್ಟ ಕಂದಮ್ಮಗಳನ್ನು ಒಂದು ನಿರ್ದಿಷ್ಟ ಕೋಣೆಗೆ ಬರಲು ಹೇಳಲಾಗಿತ್ತು. ಅಪ್ಪ ಅಮ್ಮರ ಮಡಿಲಿನಿಂದ ಆಗ ತಾನೆ ನೆಲಕ್ಕೆ ಬಿದ್ದ ಪುಟ್ಟ ಕಂದಮ್ಮಗಳು ಒಂದೆರಡು ನಿಮಿಷ ವಾತಾವರಣಕ್ಕೆ ಹೊಂದಿಕೊಳ್ಳಲು ಸೆಣಸಿದರು. ಶೆಲ್ಲಿ ಅವರಂತೂ ನೃತ್ಯ ಮಾಡುತ್ತಲೇ ಕೋಣೆಯ ನೆಲದ ಮೇಲೆ ಅಲ್ಲಲ್ಲಿ ವೃತ್ತಾಕಾರ, ತ್ರಿಕೋನಾಕಾರ, ಆಯತಾಕಾರಗಳನ್ನು ಟೇಪ್‌ನಿಂದ ಹಾಕುತ್ತಿದ್ದರು.